ಹಿಂದೆಯೇ ಪ್ರಸ್ತಾಪ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ದಿನಾಂಕ: 4.7.2011 ಅವರನ್ನು ಅಮಾನತ್ತು ಮಾಡಿದ್ದರು. ಅದನ್ನು lienshift ಮಾಡಿ ಜುಲೈ ಮತ್ತು ಆಗಸ್ಟ್ ತಿಂಗಳಿಗೆ ಅವರಿಗೆ ಭತ್ಯೆಯನ್ನು ಕೊಟ್ಟಿರುವುದಿಲ್ಲ. ಈಗ ಡಿಸೆಂಬರ್ 2011ನೇ ಇಸವಿಯಲ್ಲಿ ಅವರಿಗೆ ಮತ್ತೆ posting ಕೊಟ್ಟು ಸೆಪ್ಟೆಂಬರ್ ಡಿಸೆಂಬರ್‌ನಲ್ಲಿ ಅವರಿಗೆ ಪಾವತಿಸಿರಲಿಲ್ಲ. ಆಗ technical problem ಇತ್ತು. ಈಗ ಸಂಪೂರ್ಣವಾಗಿ ಅವರಿಗೆ ಹಣವನ್ನು ಪಾವತಿಸಲು ಡಿ.ಸಿ. ಯವರು ತಹಶೀಲ್ದಾರ್‌ರವರಿಗೆ ಆದೇಶವನ್ನು ಕೊಟ್ಟಿದ್ದಾರೆ. ದಿನಾಂಕ: 6.7.2011 ರಂದು ಅವರಿಗೆ ಭತ್ಯೆಯೂ ಸಹ ಸಿಕ್ಕಿದೆ. ಅವರ ಮೇಲೆ ಒಂದು ದೋಷಾರೋಪಣಾ ಪಟ್ಟಿ ಇರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ಪೂರ್ಣಗೊಂಡ ನಂತರ ಅವರಿಗೆ ಬಡ್ತಿಯನ್ನು ಕೊಡಲು ನಾವು ನಿಯಮಾನುಸಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಅವರಿಗೆ ದುರುದ್ದೇಶದಿಂದ ಮಾಡಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ದುರುದ್ದೇಶವೋ ಏನೋ ಗೊತ್ತಿಲ್ಲ. ಅವರ ಮೇಲೆ ಇಲಾಖಾ ವಿಚಾರಣೆಯು ನಡೆಯುತ್ತಿದೆ. ವಿಚಾರಣೆ ಮುಗಿದ ನಂತರ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ತಾವು ನಿರ್ದಿಷ್ಟವಾಗಿ ಮಾಡಿ. ಈ ಬಗ್ಗೆ ತಾವು ಕಾಲಮಿತಿಯನ್ನಾದರೂ ಹಾಕಿ. 15 ದಿವಸದಲ್ಲಿ ಮಾಡುತ್ತೀರೋ, ಅಥವಾ ಒಂದು ತಿಂಗಳಲ್ಲಿ ಮಾಡುತ್ತೀರೋ, ಈ ಬಗ್ಗೆ ದಯಮಾಡಿ ತಿಳಿಸಬೇಕು. ನೀವು 6 ವರ್ಷ ಇಟ್ಟುಕೊಂಡು ಬಿಟ್ಟರೆ ಹೇಗೆ?

5) ವಿಷಯ: ಹಾಸನದ ತಹಶೀಲ್ದಾರರ ಬಗ್ಗೆ ಆರೋಪ ಮಾಡಿರುವ ಬಗ್ಗೆ

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) : ಹಾಸನದಲ್ಲಿ ತಹಶೀಲ್ದಾರ್ ರವರ ಬಗ್ಗೆ ಡಿ.ಸಿ. ಯವರು ಮತ್ತು ಮೈಸೂರಿನ ಪ್ರಾದೇಶಿಕ ಆಯುಕ್ತರು ಒಂದು complaint ಮಾಡಿದ್ದರು. ಸಾರ್ವಜನಿಕರಿಂದ ಬಂದಂಥ ಐದಾರು ಆರೋಪಗಳು ಸಾಬೀತಾಗಿವೆ. ನಾನು ಇದರ ಬಗ್ಗೆ ಮಾತನಾಡಲಿಕ್ಕೆ Revenue Secretary ಯವರ Chamber ಗೆ ಹೋದರೆ ರೆವಿನ್ಯೂ ಕಾರ್ಯದರ್ಶಿಯವರು ನನ್ನನ್ನು ಮೊದಲು ಕೇಳಿದ ಪ್ರಶ್ನೆ "ರೀ ನೀವ್ಯಾರ್ರೀ" ಎಂದು ಶಾಸಕರಿಗೆ ಒಂದು ಯೂನಿಫಾರಂ ಕೊಡಿ. ಒಂದು ಶರ್ಟ್ ಕೊಡಿ ಇಲ್ಲವೆ ಒಂದು ಬೋರ್ಡ್ ಕೊಡಿ, ಶಾಸಕ ಎಂದು ಬೋರ್ಡ್ ಹಾಕಿಕೊಂಡು

ಒಳಗೆ ಹೋಗುತ್ತೇವೆ. ಎರಡನೆಯದು ಮೈಸೂರಿನ ಪ್ರಾದೇಶಿಕ ಆಯುಕ್ತರು ಏನೆಂದು ಬರೆಯುತ್ತಾರೆಂದರೆ ಒಂದರಿಂದ ನಾಲ್ಕರವರೆಗೆ ಎಲ್ಲಾ ಆಪಾದನೆಗಳು ಸಾಬೀತಾಗಿವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರ ಇದೆ ಎಂದು ರೆವಿನ್ಯೂ ಕಾರ್ಯದರ್ಶಿಯವರಿಗೆ ಕಳುಹಿಸಿದ್ದಾರೆ. ಒಂದು ನಿಮಿಷ,.....

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ನೀವು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆ ಸಚಿವರು ಉತ್ತರ ಹೇಳಲಿ.

ಶ್ರೀ ಹೆಚ್.ಎಸ್. ಪ್ರಕಾಶ್ : ನಮ್ಮ ನೋವನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾವು ಕಳುಹಿಸಿರುವುದು ಜನವರಿ ತಿಂಗಳಿನಲ್ಲಿ. ಅದರ ಮೇಲೆ ಅತಿ ಜರೂರು ಎಂದು ಬರೆಯುತ್ತಾರೆ. ಮುಖ್ಯಮಂತ್ರಿಗಳು 15 ದಿವಸಗಳಲ್ಲಿ ಕಡತ ವಿಲೇವಾರಿ ಮಾಡಿ ಎಂದು ಹೇಳುತ್ತಾರೆ. 15 ದಿವಸಗಳಿರಲಿ, ಮೂರು ತಿಂಗಳುಗಳಾದರೂ ಅವರ ಮೇಲೆ ಕ್ರಮ ಕೈಗೊಂಡಿಲ್ಲ. ಒಬ್ಬ ಶಾಸಕ ಹೋದರೆ ಗೌರವ ಕೊಡುವುದಿಲ್ಲ. ಕಂದಾಯ ಇಲಾಖೆಯ ಕಾರ್ಯದರ್ಶಿ ಒಬ್ಬ ಶಾಸಕರನ್ನು ಆ ರೀತಿ ಪ್ರಶ್ನೆ ಮಾಡಿದರೆ ನಮಗೆ ನಾಚಿಕೆ ಆಗುವುದಿಲ್ಲವೆ? ನಾವು ಎಂ.ಎಲ್.ಎ. ಆಗಿ ಏಕಿರಬೇಕು ಹೇಳಿ? ನೀವ್ಯಾರು ಎಂದು ಕೇಳುವುದಕ್ಕೆ ಅವರ್ಯಾರು? ಮೂರು ತಿಂಗಳು ಗಳಿಂದ ಒಬ್ಬ ತಹಶೀಲ್ದಾರ್‌ರವರನ್ನು transfer ಮಾಡಲಿಕ್ಕೆ ಸಾರ್ವಜನಿಕ ರೊಂದಿಗೆ ಛೇಂಬರ್ ಒಳಗೆ ಹೋದರೆ ಆ ತಹಶೀಲ್ದಾರ್ ಐದಾರು ಜನ ಸಾರ್ವಜನಿಕರ ಮೇಲೆ ಕೇಸು ಹಾಕುತ್ತಾರೆ. ನಾವು ಎಂ.ಎಲ್.ಎ. ಆಗಿ ಇರಬೇಕೇ? ಆ ತಹಶೀಲ್ದಾರ್‌ರವರ ಸರ್ವೀಸ್ ರಿಜಿಸ್ಟರ್ ತೆಗೆಸಲಿ. ಐದು ತಿಂಗಳುಗಳ ಮೇಲೆ ಒಬ್ಬ ಎಂ.ಎಲ್.ಎ. ಅವರನ್ನು ಇಟ್ಟು ಕೊಂಡಿ ದ್ದಾರೆಯೇ? ಅಷ್ಟು ಆಪಾದನೆಗಳನ್ನು ಹೇಳಿದರೆ ಇದಕ್ಕೆ ಉತ್ತರ ಕೊಡುವಂಥ ಜವಾಬ್ದಾರಿ ಈ ರೀತಿಯಾದರೆ ನಾವು ಇರಬೇಕೆ ಬೇಡವೆ? ನಾಚಿಕೆಯಾ ಗುತ್ತದೆ. 15 ದಿವಸಗಳಲ್ಲಿ ವಿಲೇವಾರಿ ಆಗಬೇಕಾಗಿರುವ ಒಂದು ಕಡತ ಮೂರು ತಿಂಗಳುಗಳಾದರೂ ವಿಲೇವಾರಿಯಾಗಿಲ್ಲ. ಮೈಸೂರಿನ Divisional Commissioner ರವರು ಬರೆದಂಥ ಆಪಾದನೆಗಳು ಸಾಬೀತಾಗಿವೆ. ಆದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಹೀಗಾದರೆ ನಾವು ಯಾವ ರೀತಿ ಕೆಲಸ ಮಾಡಬೇಕು?

ಅಧ್ಯಕ್ಷರು : ಸಚಿವರು ಉತ್ತರ ಹೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿ ಸಚಿವರು) : ಈಗ ಮಾನ್ಯ ಶಾಸಕರು ಉದ್ವೇಗಗೊಳ್ಳುವುದು ಬೇಡ. ಈಗ ಮಥಾಯ್ ಎನ್ನುವ ತಹಶೀಲ್ದಾರ್ ರವರ ಮೇಲೆ ಒಂದಷ್ಟು ಆರೋಪಗಳು ಇದ್ದವು. ಆ ಆರೋಪಗಳ ಹಿನ್ನೆಲೆಯಲ್ಲಿ ಮೈಸೂರಿನ ಪ್ರಾದೇಶಿಕ ಆಯುಕ್ತರು ಒಂದು ಪ್ರಸ್ತಾವನೆಯನ್ನು ಕಳುಹಿಸಿದ್ದರು. ಆ ಪ್ರಸ್ತಾವನೆಯಂತೆ ನಾವು ಒಂದು ಷೋಕಾಸ್ ನೋಟಿಸನ್ನು ಕೊಟ್ಟು ಒಂದು ಚಾರ್ಜ್ ಶೀಟ್ ಅನ್ನು ಅವರ ಮೇಲೆ ಕೊಟ್ಟಿದ್ದೇವೆ. ಇಲಾಖೆಯಿಂದ ಒಂದು ದೋಷಾರೋಪಣ ಪಟ್ಟಿಯನ್ನು ಕೊಟ್ಟಿದ್ದೇವೆ. ಈಗ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಯನ್ನು We are awaiting, ಅವರಿಗೆ ನೋಟಿಸ್ ಕೊಟ್ಟಿರುವ ದಿನಾಂಕ: 16.3.2012. ಜಿಲ್ಲಾಧಿಕಾರಿಗಳಿಂದ ಮಥಾಯ್‌ಯವರು ಹಣ ದುರುಪಯೋಗ ಮಾಡಿದ್ದಾರೆ ಎಂದು ಒಂದು ಪ್ರಸ್ತಾವನೆ ಬಂದ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಎಸ್. ಪ್ರಕಾಶ್ : ದಯಮಾಡಿ ನನ್ನ ಮಾತನ್ನು ಕೇಳಿ. ತಾವು ಹೇಳಿದ್ದು ಸರಿ ನಿಮಗೆ misguide ಆಗಿದೆ. ಅಧಿಕಾರಿಗಳು ಸದನಕ್ಕೆ ಸರಿಯಾಗಿ ಮಾಹಿತಿ ಕೊಡುತ್ತಿಲ್ಲ. 1-4 charges ಹಾಕಿದ್ದೇನೆ. ಅವು prove ಆಗಿದೆ ಎಂದು Divisional Commissioner ಹೇಳಿದ್ದಾರೆ. ಇದಕ್ಕೆ ಶಿಸ್ತು ಪ್ರಾಧಿಕಾರಿ ಕಾರ್ಯದರ್ಶಿಯವರು ಇರುತ್ತಾರೆ. ಅವರಿಂದಲೇ ಬಂದಿರುವಂಥ ಪತ್ರ ಇಲ್ಲಿದೆ. ಇದನ್ನು ತೆಗೆದುಕೊಳ್ಳಿ. ಈ ಕಡತವನ್ನೇ ನಿಮಗೆ ಕಳುಹಿಸುತ್ತೇನೆ. ಪದೇ ಪದೇ ಏಕೆ ಈ ರೀತಿ ಮಾಡುತ್ತೀರಿ? ಇಲ್ಲಿ ಕಡತ ಇದೆ. ಇದರ ಮೇಲೆ ಅತೀ ಜರೂರು ಎಂದು ಕಾರ್ಯದರ್ಶಿಯವರೇ ಬರೆದಿದ್ದಾರೆ. ಇದನ್ನು ನಾವು ಸೃಷ್ಟಿಸಿರುವಂಥ ದಾಖಲೆಯಲ್ಲ. ತಾವೇ ನೋಡಿ. ಇಲ್ಲದೇ ಹೋದರೆ 1-4 charges ಬಗ್ಗೆ Under Secretary ಹೇಳಿರುವುದನ್ನು ಈಗ ಕಳುಹಿಸಿದ್ದಾರೆ. ಜನವರಿಯಲ್ಲೇ ಬಂದಿದೆ. Divisional Commissioner ಗೆ ಕಳುಹಿಸಿದ್ದಾರೆ. ಇಷ್ಟೆಲ್ಲಾ ಆಗಿದೆ.

ಶ್ರೀ ಸಿಎಸ್. ಪುಟ್ಟೇಗೌಡ : ನಮ್ಮ ಹಾಸನದ ಶಾಸಕರು ಮಾತನಾಡುವುದೇ ಅಪರೂಪ. ದಯಮಾಡಿ ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಹೆಚ್. ಎಸ್. ಪ್ರಕಾಶ್ : ನಮಗೆ ಬಹಳ ನೋವಾಗಿದೆ. ಶಾಸಕರಾಗಿ ನಾವು ಹೇಗೆ ಕೆಲಸ ಮಾಡಬೇಕು? ಆ ತಹಶೀಲ್ದಾರ್ ಐದಾರು ಸಾರ್ವಜನಿಕರ ಮೇಲೆ ಕ್ರಿಮಿನಲ್ ಕೇಸ್ ಹಾಕಿಸುತ್ತಾರೆ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಇದು ಸರಿಯಲ್ಲ. ಶಾಸಕರ ಬಗ್ಗೆ ಗೌರವದಿಂದ ನಡೆದುಕೊಳ್ಳದಿದ್ದರೆ, ಸಂಬಂಧಪಟ್ಟ ಕಾರ್ಯದರ್ಶಿಯವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು. ಈ ರೀತಿಯಾದರೆ ಹೇಗೆ? We can't tolerate this nonsense. ಶಾಸಕರಿಗೆ ಈ ರೀತಿ ಅಗೌರವ ತೋರಿಸಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ನೀವು ಅವರ ಹಾಗೆ ಮಾತನಾಡಬೇಡಿ, ಪ್ಲೀಸ್.

ಶ್ರೀ ಸಿ.ಎಸ್. ಪುಟ್ಟೇಗೌಡ : ಈ ರೀತಿಯಾದರೆ ಹೇಗೆ?

ಶ್ರೀ ಕೆ.ಎಂ. ಶಿವಲಿಂಗೇಗೌಡ : ತಹಶೀಲ್ದಾರ್‌ರವರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆಂದರೆ ಕುಳಿತುಕೊಳ್ಳುವುದಕ್ಕೆ ಸರಿಯಾಗಿ ಕುರ್ಚಿ ಕೊಡುವುದಿಲ್ಲ. ನೀವ್ಯಾರು ಎನ್ನುತ್ತಾರೆ, ನಾವು ಅವಮಾನಿತರಾಗಬೇಕೆನ್ನುವುದು ನಿಮ್ಮ ಆಸೆಯೇ?

ಶ್ರೀ ಎಸ್. ಸುರೇಶ್ ಕುಮಾರ್ : ಹೆಚ್.ಎಸ್. ಪ್ರಕಾಶ್‌ರವರು ಉದ್ರೇಕವಾಗಿ ಪ್ರಸ್ತಾಪ ಮಾಡಿದ್ದಾರೆ. ಅವರ ಭಾವನೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ.

ಶ್ರೀ ಹೆಚ್.ಎಸ್. ಪ್ರಕಾಶ್ : ಒಂದು ನಿಮಿಷ ಇಲ್ಲಿ ಕೇಳಿ ಸಾರ್. ಇದನ್ನು ನಾವು ಸೃಷ್ಟಿ ಮಾಡಿರುವುದು ಅಲ್ಲ. ನಾನೇ ಓದುತ್ತೇನೆ ಕೇಳಿ. ತಮಗೆ ಕಳುಹಿಸುತ್ತೇನೆ ನೋಡಿ. ಇಲ್ಲವೇ ನಾನೇ ಓದುತ್ತೇನೆ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ಅವರು ಓದಲಿ ಬಿಡಿ, ಸುರೇಶ್ ಕುಮಾರ್‌ರವರೇ ನಿಮ್ಮ ಬಗ್ಗೆ ನಮಗೆಲ್ಲಾ ಅಪಾರ ಗೌರವ ಇದೆ. ಓದಲಿ ಸರ್.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರು ಅನುಮತಿ ಕೊಟ್ಟರೆ ಓದಿ.

ಅಧ್ಯಕ್ಷರು : Please..

ಶ್ರೀ ಹೆಚ್.ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ಜಿಲ್ಲಾಧಿಕಾರಿಗಳು ಬರೆದಿರುವಂಥ ಪತ್ರ. "ಹಾಸನ ಜಿಲ್ಲೆಯ ತಹಶೀಲ್ದಾರ್ ರವರು ದಿನಾಂಕ: 9.11.2011 ತಹಲ್‌ವರೆಗೆ ಕಾರ್ಯನಿರ್ವಹಿಸಿದ್ದು ಸದರಿ ಮೇಲಾಧಿಕಾರಿಗಳು ಅಧಿಕಾರದ ಆದೇಶವನ್ನು ಪಾಲಿಸದೆ ನಿರ್ಲಕ್ಷ್ಯವನ್ನು ತೋರಿಸಿ ಕರ್ತವ್ಯ ಲೋಪ ಮಾಡಿರುವುದರಿಂದ ಹಾಸನ ಜಿಲ್ಲಾಧಿಕಾರಿಗಳು ಸದರಿ ಅಧಿಕಾರಿಯವರಿಂದ ಕರಡು ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಉಲ್ಲೇಖಿಸಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ. Divisional Commissioner ಬರೆಯುತ್ತಾರೆ, "ಜಿಲ್ಲಾಧಿಕಾರಿಗಳು ಇದನ್ನು ಪರಿಶೀಲಿಸಿ ಶ್ರೀ ಕೆ. ಮಥಾಯ್‌ಯವರು ಮೇಲಾಧಿಕಾರಿಯವರ ಆದೇಶವನ್ನು ಪಾಲಿಸದೆ ನಿರ್ಲಕ್ಷ್ಯ, ಕರ್ತವ್ಯ ಲೋಪ ಎಸಗಿರುವುದರಿಂದ ಈ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣಾ ಪಟ್ಟಿಯನ್ನು ಪರಿಷ್ಕರಿಸಿ ಕಳುಹಿಸಲಾಗಿದೆ. ತಹಶೀಲ್ದಾರ ರವರು ವ್ಯಂದ ಅಧಿಕಾರಿಯಾಗಿರುವುದರಿಂದ ಶಿಸ್ತು ಪ್ರಾಧಿಕಾರ ಸರ್ಕಾರ ದವರೇ ಆಗಿರುವುದರಿಂದ ಸದರಿ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ದೋಷಾರೋಪಣಾ ಪಟ್ಟಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಿದೆ." ಇದನ್ನು ಕಾರ್ಯದರ್ಶಿಯವರಿಗೆ ಸಲ್ಲಿಸಿದ್ದಾರೆ. ಯಾವಾಗ ಬರೆದಿದ್ದಾರೆಂದರೆ 16.1.2012 ರಲ್ಲಿ ಅತಿ ಜರೂರು ಎಂದು ಬರೆದಿಟ್ಟುಕೊಂಡಿದ್ದಾರೆ. ಇದನ್ನು ನಾನು ಸೃಷ್ಟಿ ಮಾಡಿರುವ ಪತ್ರ ಅಲ್ಲ ಇದು. ತಾವು ಓದಿ. ಸದನಕ್ಕೆ ತಪ್ಪು ಮಾಹಿತಿಯನ್ನು ಏಕೆ ಕೊಡುತ್ತಿದ್ದೀರಿ? ನಾನು ತಪ್ಪು ಹೇಳಿದರೆ ನನಗೆ ಶಿಕ್ಷೆ ಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಎಲ್ಲಾ ವಿಚಾರವನ್ನು ಮಾನ್ಯ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ನಾನು ಸಂಜೆ ಒಳಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು. ಸಂಜೆ ಒಳಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಜನವರಿಯಲ್ಲಿ ಆ ವರದಿ ಕೊಟ್ಟಿದ್ದಾರೆ. ಇನ್ನು ಎರಡೂವರೆ ತಿಂಗಳುಗಳಾದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಈಗ ಸಂಜೆಯೊಳಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ವಿರೋಧ ಪಕ್ಷದವರೆಂದು ಉದ್ದೇಶಪೂರ್ವಕವಾಗಿ ಈ ರೀತಿ ಮಾಡುತ್ತಿದ್ದಾರೆಯೇ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಆಯಿತು. ಸಂಜೆ ಒಳಗೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ : ಒಂದು ನಿಮಿಷ ತಡಿಯಿರಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಸಂಜೆಯೊಳಗೆ ನಾವು ನಿಮಗೆ ತಿಳಿಸುತ್ತೇವೆ.

ಅಧ್ಯಕ್ಷರು : ಇವತ್ತು ಸಂಜೆ ಒಳಗೆ ತಿಳಿಸುತ್ತಾರೆ.

6) ವಿಷಯ : ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಿವೇಶನಗಳ ಅಕ್ರಮ ಸಕ್ರಮದ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಶಿರಾ) : ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಿವೇಶನಗಳ ಅಕ್ರಮ ಸಕ್ರಮದ ಬಗ್ಗೆ ಮಾನ್ಯ ಸಚಿವರಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಸಚಿವರು) : ಈ ವಿಚಾರದ ಬಗ್ಗೆ ಈ ಹಿಂದೆ ಕೂಡ ಜಯಚಂದ್ರರವರು ಪ್ರಸ್ತಾಪ ಮಾಡಿದ್ದರು. ಏನೇನು ಅಕ್ರಮ ನಿವೇಶನಗಳನ್ನು ಹಂಚಿಕೆ ಮಾಡಿದ್ದರು ಆ ಹಂಚಿಕೆಯ ಪ್ರಕ್ರಿಯೆಯನ್ನು ನಾವು ರದ್ದು ಮಾಡಿದ್ದೇವೆ. ರದ್ದು ಮಾಡಿದ ನಂತರ ಅವರು ಕೋರ್ಟಿಗೆ ಹೋಗಿದ್ದಾರೆ. ಆ ತಡೆಯಾಜ್ಞೆಯನ್ನು ತೆಗೆಸುವುದಕ್ಕೆ ನಾವು ಸರ್ಕಾರದ ಕಡೆಯಿಂದ ಕೂಡಲೇ ಕ್ರಮವನ್ನು ತೆಗೆದುಕೊಂಡು ಯಾರ್ಯಾರು ಇದಕ್ಕೆ ಕಾರಣಕರ್ತರು ಇದ್ದಾರೆ ಅವರ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ.

7) ವಿಷಯ : ಗಿರಿನಗರ ಪೊಲೀಸ್ ಠಾಣೆಯಲ್ಲಿ ಅಮಾಯಕರ ಮೇಲೆ ನಡೆದ ಘಟನೆಯ ಬಗ್ಗೆ

ಶ್ರೀ ಗೂಳಿಹಟ್ಟಿ ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರಲ್ಲಿ ನನ್ನ ಮನವಿ. ನಿನ್ನೆ ನನ್ನ ಮತಕ್ಷೇತ್ರದವರು ಬೆಂಗಳೂರಿಗೆ ಉದ್ಯೋಗ ಅರಸಿಕೊಂಡು ಕೂಲಿ ಮಾಡಲಿಕ್ಕೆ ಬಂದಿದ್ದರು. ಅವರು paint ಮಾಡಲಿಕ್ಕೆ ಒಂದು ಮನೆಗೆ ಹೋದರೆ ಅವರ ಮೇಲೆ ಕಳ್ಳತನ ಆರೋಪ ಹೊರಿಸಿ ಅವರನ್ನು ಗಿರಿನಗರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಮನಸ್ಸೋ ಇಚ್ಛೆ ಥಳಿಸಿ, ನೇತಾಕಿ ಅವರ ಮೇಲೆ ಮಾರಣಾಂತಿಕ ಹಲ್ಲೆ